# ಕೃಷಿ ವಸ್ತುಪ್ರದರ್ಶನದಲ್ಲಿ ಮಾಹಿತಿಗಳ ಮಹಾಪೂರ

ವಿಟ್ಲ: ವಿಟ್ಲ ಕೃಷಿಮೇಳ ಅಂಗವಾಗಿ ಕೃಷಿ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ವಸ್ತುಪ್ರದರ್ಶನದಲ್ಲಿ 36ಕ್ಕೂ ಅಧಿಕ ಮಾರಾಟ ಮಳಿಗೆಗಳಿದ್ದು ಕೃಷಿಕರಿಗೆ ಮಾಹಿತಿಗಳ ಮಹಾಪೂರವನ್ನೇ ಒದಗಿಸುತ್ತಿದ್ದವು.

ಶಿವಮೊಗ್ಗದ ಹೇರ್ಳೆ ಟೆಕ್ನಿಕಲ್ ಮತ್ತು ರಿಸರ್ಚ್ ವರ್ಕ್ಸ್ ವತಿಯಿಂದ ಮರ ಏರುವ ಯಂತ್ರ, ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ(ಕೆ.ವಿ.ಕೆ) ವತಿಯಿಂದ ಚಕ್ಕುಲಿ, ಉಂಡೆ, ಚಟ್ನಿ ಹುಡಿ ಮೊದಲಾದ ತಿಂಡಿಗಳ ಮಾರಾಟ ಹಾಗೂ ಪ್ರದರ್ಶನ, ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ(ಸಿಪಿಸಿಆರ್ಐ)ದಿಂದ ಹಲಸಿನ ವಿವಿಧ ವಸ್ತುಗಳು ಪ್ರದರ್ಶನ, ಮಂಗಳೂರು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹಲಸಿನ ರಸ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳು, ಶಿವಮೊಗ್ಗ ಕೃಷಿ ತೋಟಗಾರಿಕಾ ವಿಶ್ವವಿದ್ಯಾಲಯದ ತೆಂಗು, ಪಪ್ಪಾಯಿ, ಪೆಪ್ಪರ್, ಮೀಟರ್ ಅಲಸಂಡೆ, ಗುಳ್ಳ, ಗೇರು ಗಿಡ, ಉಡುಪಿ ಮಲ್ಲಿಗೆ, ಚೋಟವಾಡಿ, ಮೋಹಿತ್ ಅಡಕೆ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದಿಂದ ವಿವಿಧ ತಳಿಯ ಗಿಡಗಳು, ದಕ್ಷಿಣ ಕನ್ನಡ ಜಿಲ್ಲಾ ತೋಟಗಾರಿಕಾ ಇಲಾಖೆಯ ವತಿಯಿಂದ 20 ವಿವಿಧ ಬೀಜಗಳ ಪ್ರದರ್ಶನ ಹಾಗೂ ಮಾರಾಟ ನಡೆಯಿತು.



ಕೃಷಿ ವಸ್ತು ಪ್ರದರ್ಶನದಲ್ಲಿ 36ಕ್ಕೂ ಅಧಿಕ ಮಾರಾಟ ಮಳಿಗೆಗಳಿದ್ದು, ಕೃಷಿಕರಿಗೆ ಮಾಹಿತಿಗಳ ಮಹಾಪೂರ ನೀಡುತ್ತಿದ್ದವು.

## ಕಲ್ಪರಸ ಕುಡಿದ ಡಿವಿಎಸ್

ತೆಂಗಿನ ಮರದಿಂದ ತಯಾರಿಸುವ ಕಲ್ಪರಸದ ತಯಾರಿಕಾ ವಿಧಾನಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದ ಸಂಸದ ಡಿ.ವಿ. ಸದಾನಂದ ಗೌಡ ಅವರು -4ಡಿಗ್ರಿಯಲ್ಲಿ ಇರಿಸಿದ ನೀರಾ ಸವಿದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಡಿಕೇರಿಯ ಸಂಬಾರ ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಪೆಪ್ಪರ್, ಲವಂಗ, ಕಾಳು ಮೆಣಸು, ಏಲಕ್ಕಿ ವಿವಿಧ ತಳಿಯ ಪ್ರದರ್ಶನ, ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿವಿ ವತಿಯಿಂದ ಚಾಲಿ ಅಡಕೆ, ಕೆಂಪು ಅಡಕೆ, ಹಾಲುಕೆಸು(ಶಿರಸಿ) ಪ್ರದರ್ಶನ, ಬೀಜಸಿರಿ ಸಾವಯವ ಕೃಷಿ ಉತ್ಪನ್ನಗಳ ಸುಮಾರು 44 ಬಗೆಯ ಬೀಜಗಳ ಮಾರಾಟ- ಪ್ರದರ್ಶನ ನಡೆಯಿತು.

VIJayavani Kadalu dt 11-01-2015